ಕ್ರ.ಸಂ.	ವಿಧಾನಸಭಾ ಕ್ಷೇತ್ರ	1999-2000	2000-2001	2001-2002
5.	ಹುಲಸೂರು	40.90	50.60	36.00
6.	ಹುಮನಾಬಾದ	39.50	45.95	26.26
	ಒಟ್ಟು	343.35	442.01	236.98

ಅ) ಯಾವುದು ಇಲ್ಲ

ಇ) ಉದ್ಭವಿಸುವುದಿಲ್ಲ

ಬೀದರ್ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಸ್ಥಳಗಳನ್ನು ಅಭಿವೃದ್ಧಿ ಪಡಿಸುವುದು

1808 (2457) ಶ್ರೀ ರಾಜೇಂದ್ರ ವರ್ಮ (ಹುಲ್‌ಸೂರ್) ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಯಾವ ಯಾವ ಸ್ಥಳಗಳನ್ನು ಪ್ರವಾಸೋದ್ಯಮ ತಾಣಗಳೆಂದು ಗುರುತಿಸಲಾಗಿದೆ; ಈ ಪೈಕಿ ಯಾವ ಯಾವ ಪ್ರವಾಸಿ ಸ್ಥಳಗಳು ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುತ್ತವೆ?

ಆ) ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯ ಪ್ರವಾಸೋದ್ಯಮ ಸ್ಥಳಗಳ ಅಭಿವೃದ್ಧಿಗಾಗಿ ಪ್ರತಿ ವರ್ಷ ವೆಚ್ಚ ಮಾಡಲಾಗಿರುವ ಹಣವೆಷ್ಟು? ಹಾಗೂ ಈ ಪ್ರವಾಸಿ ಸ್ಥಳಗಳನ್ನು ನೋಡಲು ಬರುವ ಪ್ರವಾಸಿಗರಿಗೆ ಕಲ್ಪಿಸಲಾಗಿರುವ ಮೂಲಭೂತ ಸೌಕರ್ಯಗಳೇನು? (ಪ್ರತಿ ಪ್ರವಾಸಿ ಸ್ಥಳಕ್ಕೆ ವೆಚ್ಚ ಮಾಡಲಾಗಿರುವ ಹಣದ ಹಾಗೂ ಪ್ರತಿ ಪ್ರವಾಸಿ ಸ್ಥಳಗಳಲ್ಲಿ ಕಲ್ಪಿಸಲಾಗಿರುವ ಮೂಲಭೂತ ಸೌಕರ್ಯಗಳ ಬಗ್ಗೆ ಪ್ರತ್ಯೇಕ ವಿವರಗಳನ್ನು ಒದಗಿಸುವುದು)

ಇ) ರಾಜ್ಯ ಸರ್ಕಾರವು ಇತ್ತೀಚೆಗೆ ಹೊಸ ಪ್ರವಾಸೋದ್ಯಮ ನೀತಿಯನ್ನು ಪ್ರಕಟಿಸಿರುವುದು ನಿಜವಲ್ಲವೇ; ಹಾಗಿದ್ದಲ್ಲಿ, ಈ ನೀತಿಯ ಮುಖ್ಯಾಂಶಗಳೇನು?

ಈ) ಹೊಸ ಪ್ರವಾಸೋದ್ಯಮ ನೀತಿಯಲ್ಲಿ ಹಿಂದುಳಿದ ಬೀದರ್ ಜಿಲ್ಲೆಯಲ್ಲಿ ಪ್ರವಾಸಿ ತಾಣಗಳ ಅಭಿವೃದ್ಧಿ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ಯಾವ ಅನುಕೂಲಕರವಾದ ಅಂಶಗಳಿವೆ?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು)

1. ಬೀದರ್, ಹುಮನಾಬಾದ್, ಜಲಸಂಘಿ, ಬಸವಕಲ್ಯಾಣ, ನಾರಾಯಣಪುರ ಮತ್ತು ಕಾರಂಜಾ ಪ್ರಾಜೆಕ್ಟ್

2. ಹುಲಸೂರು ಮತಕ್ಷೇತ್ರದಲ್ಲಿ ಈ ಕೆಳಕಂಡ ಪ್ರವಾಸಿ ಸ್ಥಳಗಳಿವೆ:

1. ಜಲಸಂಘಿ 2. ಘೋಡವಾಡಿ

ಅ) 1. 1999-2000 - ಇಲ್ಲ

2. 2000-2001 - ರೂ. 9.25 ಲಕ್ಷಗಳು

3. 2001-2002 - ರೂ. 9.00 ಲಕ್ಷಗಳು

ನಾನಕ್ ಝರ ಬಳಿ ರೂ. 9.25 ಲಕ್ಷಗಳ ಅಂದಾಜು ವೆಚ್ಚದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ನಿರ್ಮಿಸಲಾಗಿದೆ. ಘೋಡವಾಸಿ ಹಜರತ್ ಸೈಯದ್

ಇಸ್ಮಾಯಿಲ್ ಷಾಹ್ ಖಾದ್ರಿ ದರ್ಗಾ ಬಳಿ ರೂ. 9.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ನಿರ್ಮಿಸಲಾಗಿದೆ.

ಇ) 1. ಭೂ ಪರಿವರ್ತನಾ ಶುಲ್ಕ ವಿನಾಯಿತಿ

2. ರೂ. 50.00 ಕೋಟಿಗಳಿಗೆ ಕಡಿಮೆ/ಹೆಚ್ಚು ಬಂಡವಾಳ ಹೂಡಿಕೆಗೆ ಶೇಕಡ 50/ ಶೇಕಡ 100 ರಷ್ಟು ಸ್ಟಾಂಪ್ ಸುಂಕದಿಂದ ವಿನಾಯಿತಿ

3. ರೂ 1,000/- ಗಳಿಗೆ ರೂ. 1.00ರಂತೆ ನೋಂದಣಿ ಶುಲ್ಕದಲ್ಲಿ ರಿಯಾಯಿತಿ

4. ಯೋಜನೆ ಜಾರಿಗೆ ಬಂದ ಮೂರು ವರ್ಷಗಳ ಅವಧಿಗೆ ಪ್ರವೇಶ ವಿನಾಯಿತಿ

5. ಸರ್ಕಾರಿ ಜಮೀನನ್ನು 50ರಷ್ಟು ಮಾರುಕಟ್ಟೆ ಬೆಲೆಯಲ್ಲಿ ಖಾಸಗಿ ಉದ್ಯಮಿಗಳಿಗೆ ಪ್ರವಾಸೋದ್ಯಮ ಯೋಜನೆಗಳನ್ನು ನಿರ್ಮಿಸಲು ನೀಡುವುದು.

6. ಏವಿಯೇಷನ್ ಯರ್ಬೈನ್ ಇಂಧನದ ಶುಲ್ಕ ಶೇಕಡ 4 ರಷ್ಟು ಇಳಿತ ಮತ್ತು ಖಾಸಗಿ ವಾಯುಯಾನ ಸಂಸ್ಥೆಗಳಿಗೆ ಮೊದಲ ಮೂರು ವರ್ಷದಲ್ಲಿ ಶೇಕಡ 50 ರಷ್ಟು ಭಾಗದ ಟಿಕೇಟ್‌ಗಳಿಗೆ ಖಾತರಿ.

7. ರೂ. 400.00 ಮೇಲ್ಪಟ್ಟ ಕೊಠಡಿ ಬಾಡಿಗೆಗೆ ಪಾವತಿಸಿದ ಮೊತ್ತಕ್ಕೆ ಮಾತ್ರ ಪಾವತಿಸುವುದು. ಇದಕ್ಕೆ ಶೇಕಡ 10ರ ಮಿತಿಯನ್ನು ವಿಧಿಸುವುದು.

8. ಐಮ್ಯಾಕ್ ಥಿಯೇಟರ್‌ಗಳಿಗೆ ಮೊದಲ ಮೂರು ವರ್ಷಗಳ ಶೇಕಡ 100 ನಂತರ ಎರಡು ವರ್ಷಗಳಿಗೆ ಶೇಕಡ 75 ರಷ್ಟು ಮನೋರಂಜನಾ ತೆರಿಗೆ ವಿನಾಯಿತಿ.

9. ಆಂತರ ರಾಜ್ಯಗಳ ಮಧ್ಯೆ ಓಡಾಡುವ ವಾಹನಗಳಿಗೆ ವಿಧಿಸುವ ತೆರಿಗೆಯನ್ನು ಪರಸ್ಪರ ಸಮ್ಮತಿಸುವ ತೆರಿಗೆಗೆ ನಿಗಧಿಪಡಿಸುವುದು.

10. ಆಮದು ಮಾಡಿಕೊಂಡ ಮದ್ಯಕ್ಕೆ ವಿಧಿಸುವ ಶೇಕಡ 66ರಷ್ಟು ಹೆಚ್ಚುವರಿ ರಾಜ್ಯ ಅಬಕಾರಿ ಸುಂಕವನ್ನು ಶೇಕಡ 25ಕ್ಕೆ ಇಳಿಸುವುದು ಅಥವಾ ಮೂಲ ದರದ ಮೇಲೆ ತೆರಿಗೆ ವಿಧಿಸುವುದು.

11. ರಾಜ್ಯದ ಕೈಗಾರಿಕಾ ನೀತಿ (2001-06)ರಲ್ಲಿ ನೀಡಲಾಗಿರುವ ರಿಯಾಯಿತಿ ಮತ್ತು ಉತ್ತೇಜನಗಳನ್ನು ಪ್ರವಾಸೋದ್ಯಮ ರಂಗದಲ್ಲಿ ಖಾಸಗಿ ಬಂಡವಾಳ ಹೂಡಿಕೆಗೆ ನೀಡಲಾಗುವುದು.

ಈ) 2002-07ರ ಪ್ರವಾಸೋದ್ಯಮ ನೀತಿ ರಾಜ್ಯದ ಎಲ್ಲ ಜಿಲ್ಲೆಗಳಿಗೂ ಅನ್ವಯಿಸುತ್ತದೆ. ಬೀದರ್‌ನಲ್ಲಿರುವ ವಿಮಾನ ನಿಲ್ದಾಣವನ್ನು ಪ್ರವಾಸಿಗರಿಗೆ ಅಭಿವೃದ್ದಿಪಡಿಸುವ ಪ್ರಸ್ತಾವನೆ ಹೊಸ ಪ್ರವಾಸೋದ್ಯಮ ನೀತಿಯಲ್ಲಿದೆ.

ಸಂಘಗಳ ಕಾಯ್ದೆಯಂತೆ ನಡೆದುಕೊಳ್ಳದಿರುವ ಕುಂಬಾರರ ಸಂಘ

1809 (2349) ಶ್ರೀ ರವೀಂದ್ರನಾಥ್ ಎಸ್.ಎ. (ಮಾಯಕೊಂಡ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಘಗಳ ಕಾಯ್ದೆ ನಿಯಮದಂತೆ ನೋಂದಣಿಯಾಗಿರುವಂತಹ ಕುಂಬಾರ ಸಂಘ

(ರ) ಇದು ಕುಂಬಾರರ ಸಮುದಾಯದ ಕ್ಷೇಮಾಭಿವೃದ್ಧಿಗಾಗಿ ಇರುವ ಸಂಸ್ಥೆಯಾಗಿರುವುದು ನಿಜವೇ